# ಕರ್ವಾಲೊ ಮತ್ತು ಸಾಮಾಜಿಕ ವಾಸ್ತವಗಳು

**ಸಂತೋಷ ಉಂಡಾಡಿ[1] & ಎಸ್.ಎಮ್. ಗಂಗಾಧರಯ್ಯ[2]**

[1]ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ, ಬೆಳಗಾವಿ.

[2]ಪ್ರಾಧ್ಯಾಪಕರು, ಫ.ಗು.ಹಳಕಟ್ಟಿ, ಸ್ನಾತಕೋತ್ತರ ಅಧ್ಯಯನ ಕೇಂದ್ರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.17253225

## ABSTRACT:

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿರುವ ಕರ್ವಾಲೊ ಕಾದಂಬರಿ 1980ರಲ್ಲಿ ರಚನೆಯಾಗಿ, ಇಂದಿನವರೆಗೆ 70 ಮರು ಮುದ್ರಣಗಳನ್ನು ಕಂಡಿದೆ. ಹಲವಾರು ಭಾರತೀಯ ಮತ್ತು ಇತರೆ ದೇಶಗಳ ಭಾಷೆಗೆ ಅನುವಾದಗೊಂಡಿದೆ. ತೇಜಸ್ವಿಯವರ ಎಲ್ಲಾ ಕೃತಿಗಳು ಪರಿಸರದ ಆಗುಹೋಗುಗಳನ್ನು ಮತ್ತಿತರ ಸಂಗತಿಗಳನ್ನು ಅತ್ಯಂತ ಸಹಜವಾದ ವಾಸ್ತವ ನೆಲೆಗಟ್ಟಿನಲ್ಲಿ ನಿರೂಪಿಸುತ್ತವೆ. ಈ ಕಾದಂಬರಿ ತನ್ನ ವಿಶೇಷವಾದ ಕಥೆ ಮತ್ತು ನಿರೂಪಣ ಶೈಲಿಯಿಂದ ಕನ್ನಡ ಸಾಹಿತ್ಯದಲ್ಲಿ ಭಿನ್ನವಾಗಿ ನಿಲ್ಲುತ್ತದೆ.

ತೇಜಸ್ವಿಯವರು ತಮ್ಮ ಕೃತಿಗಳಲ್ಲಿ ಉತ್ಪ್ರೇಕ್ಷಿತವಾದ, ಅತೀ ಕಾಲ್ಪನಿಕವಾದ ಕಥೆಗಳನ್ನು ಹೇಳುವುದಿಲ್ಲ. ಅವರ ಕೃತಿಗಳಲ್ಲಿ ಹೆಚ್ಚಾಗಿ ನಮಗೆ ಕಾಣುವುದು, ಸಮಾಜದ ಯಥಾವತ್ತಾದ ಚಿತ್ರಣ. ಸಮಾಜದ ಅಂಕುಡೊಂಕುಗಳನ್ನು, ಓರೆಕೋರೆಗಳನ್ನು ಅವರು ಯಾವುದೇ ಬಿಡೆಯಿಲ್ಲದೇ ಚಿತ್ರಿಸುತ್ತಾರೆ. ಸಮಾಜದ ಬದುಕನ್ನು ತದ್ರೂಪವಾಗಿ ಸಾಹಿತ್ಯದಲ್ಲಿ ತರುವ ಮೂಲಕ ಅಲ್ಲಿಯೆ ಒಂದು ತಮಾಷೆಯನ್ನು, ಹಾಸ್ಯವನ್ನು, ವ್ಯಂಗ್ಯವನ್ನು ಸೃಷ್ಟಿಸುತ್ತಾರೆ.

ಕರ್ವಾಲೊ ಕಾದಂಬರಿಯು ಜೀವ ವಿಕಾಸದ ನೆಲೆಯನ್ನು ಶೋಧಿಸುವ ಮನುಷ್ಯನ ವಿಫಲ ಪ್ರಯತ್ನದ ಕಥೆಯನ್ನು ಹೇಳುವ ಕೃತಿಯಾಗಿದೆ. ವಿಜ್ಞಾನದ ಮೂಲಕ ಜೀವನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವ ಹಂಬಲವನ್ನು ಇದು ಪ್ರಕಟಿಸುತ್ತದೆ. ಈ ಕಾದಂಬರಿಯ ಮೂಲ ನೆಲೆ ಹುಡುಕಾಟವೇ. ಹುಡುಕಾಟ ಮನುಷ್ಯನ ಆದಿಮ ಪ್ರವೃತ್ತಿಗಳಲ್ಲಿ ಒಂದು. ಮನುಷ್ಯ ಭೂಮಿಯ ಮೇಲೆ ಅಸ್ತಿತ್ವಪಡೆದಾಗಿನಿಂದ ಸದಾ ಕುತೂಹಲಿಯಾಗಿ ತನ್ನ ಹುಡುಕುವ ಮೂಲಭೂತ ಗುಣವನ್ನು ಕಾಪಾಡಿಕೊಂಡಿದ್ದಾನೆ. ಇಲ್ಲಿ ಕರ್ವಾಲೊ ಕೂಡ ಮಂದಣ್ಣ, ನಿರೂಪಕರು ಮತ್ತು ತನ್ನ ಗೆಳೆಯರ ಬಳಗದೊಂದಿಗೆ ಹಾರುವ ಓತಿಯನ್ನು ಹುಡುಕುವ ಕಥೆಯು ನಮಗೆ ತೆರೆದುಕೊಳ್ಳುತ್ತದೆ. ಅದರ ಮಧ್ಯದಲ್ಲಿ ಸಾಮಾಜಿಕ ಬದುಕು, ರಾಜಕೀಯ, ಮದುವೆ ಪ್ರಸಂಗ, ಪ್ರಕೃತಿಯ ವಿನಾಶ ಮುಂತಾದ ಅಂಶಗಳು ಕಾಣಿಸಿಕೊಳ್ಳುತ್ತವೆ.

**KEYWORDS:**

ಕರ್ವಾಲೊ, ಮಂದಣ್ಣ, ಹಾರುವ ಓತಿ, ಪ್ರಕೃತಿ, ವಿನಾಶ, ಸಮಾಜ, ವಾಸ್ತವ.

ಪೂರ್ಣಚಂದ್ರ ತೇಜಸ್ವಿಯವರು ಕಾಡು ಮತ್ತು ಕ್ರೌರ್ಯ(2013), ಮಾಯಾಲೋಕ(2006), ಜುಗಾರಿಕ್ರಾಸ್(1994), ಚಿದಂಬರ ರಹಸ್ಯ(1985) ಮತ್ತು ಕರ್ವಾಲೊ(1980) ಎಂಬ ಐದು ಕಾದಂಬರಿಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದರು. ಅದರಲ್ಲಿ ಕರ್ವಾಲೊ ಮೊದಲನೆಯದು ಮತ್ತು ಬಹಳ ಪ್ರಮುಖವಾದುದು. ಈ ಕಾದಂಬರಿ ಅದರ ವಸ್ತು ಮತ್ತು ಶೈಲಿಯಿಂದ ಓದುಗರ ಮತ್ತು ವಿಮರ್ಶಕರ ಮನಸ್ಸನ್ನು ಗೆದ್ದಿದೆ. ಇಲ್ಲಿ ತೇಜಸ್ವಿ ಡಾರ್ವಿನ್‌ನ ವಿಕಾಸವಾದದ ಕಥೆಯನ್ನು ಬಹಳ ಸರಳವಾಗಿ ಕಟ್ಟಿಕೊಟ್ಟಿದ್ದಾರೆ. ತೇಜಸ್ವಿಯವರ ಶೋಧನೆಯ ಪ್ರವೃತ್ತಿ ಅವರ ಒಟ್ಟು ಸಾಹಿತ್ಯದ ಮೂಲಸೆಲೆಯಾಗಿದ್ದು ಅವರ ಬಹುತೇಕ ಕೃತಿಗಳು ಆ ನೆಲೆಯಲ್ಲಿಯೆ ರೂಪ ಪಡೆದಿವೆ. ಪೌರಾತ್ಯ ಮತ್ತು ಪಾಶ್ಚಿಮಾತ್ಯ ಚಿಂತನೆಗಳ ಮುಖಾಮುಖಿಯನ್ನು ಅಥವಾ ಜೊತೆಯಾಗಿ ಸಾಗುವುದನ್ನು ಕರ್ವಾಲೊದಲ್ಲಿ ಕಾಣಬಹುದು.

ಹುಡುಕಾಟ ಯಾವಾಗಲೂ ನಿಗೂಢ ಮತ್ತು ವಿಸ್ಮಯದ ಜೊತೆಗೆ ಕುತೂಹಲವನ್ನು ಉಂಟುಮಾಡುತ್ತದೆ. ಹುಡುಕಾಟ ಮಾನವನ ಮೂಲಭೂತ ಪ್ರವೃತ್ತಿಗಳಲ್ಲಿ ಒಂದು. ಮನುಷ್ಯ ಭೂಮಿಯ ಮೇಲೆ ಅವತರಿಸಿದಾಗಿನಿಂದ ಹುಡುಕಾಟವನ್ನು ನಡೆಸಿಕೊಂಡೆ ಬಂದಿದ್ದಾನೆ. ಯಾವುದೋ ಕಾರಣಕ್ಕೆ ತಂದೆಯಿಂದ ಬಾಲ್ಯದಲ್ಲಿಯೆ ಪರಿತ್ಯಕ್ತವಾಗಿರುವ ಮಕ್ಕಳು ತಮ್ಮ ತಂದೆಯನ್ನು, ತಂದೆಯ ಕುರುಹನ್ನು ಹುಡುಕುವಂತೆ, ಇಡೀ ಮಾನವ ಜನಾಂಗದ ಮೂಲದ ಹುಡುಕಾಟವನ್ನು ಅಥವಾ ಜೀವ ವಿಕಾಸದ ನೆಲೆಗಳಲ್ಲಿ ತಪ್ಪಿಸಿಕೊಂಡಿರುವ, ಕಣ್ಮರೆಯಾಗಿರುವ ಜೀವಿಗಳನ್ನು ಹುಡುಕುವುದನ್ನು ಇಲ್ಲಿ ಕಾಣಬಹುದು. ಇಲ್ಲಿ ಮಂದಣ್ಣನ ಪಾತ್ರ ಓರಿಯಂಟಲಿಸಂನ ಪ್ರತೀಕವಾಗಿ ಕಾಣುತ್ತದೆ. ಆದರೆ ಆ ಪಾತ್ರದ ನಿರ್ಮಾಣದಲ್ಲಿ ತೇಜಸ್ವಿಯವರು ಮಂದಣ್ಣನನ್ನು ಸ್ವಲ್ಪ ಎತ್ತರಿಸಿ ಸ್ಥಳೀಯ ಜ್ಞಾನದ, ಪ್ರಾದೇಶಿಕ ವಿಜ್ಞಾನಿಯಾಗಿ ಮತ್ತು ಆಕ್ಸಿಡೆಂಟಲಿಸಂನ ಅಥವಾ ಪಾಶ್ಚಾತ್ಯ ಜ್ಞಾನದ ಪ್ರತಿನಿಧಿಯಂತಿರುವ ಕರ್ವಾಲೊ ಒಂದು ಮೆಟ್ಟಿಲು ಕೆಳಗಿಳಿದು ಮಂದಣ್ಣನ ಪೌರಾತ್ಯ, ಸ್ಥಳೀಯ ಜ್ಞಾನವನ್ನು ಗೌರವಿಸುವುದನ್ನು ಕಾಣಬಹುದು. ಆ ಮೂಲಕ ತೇಜಸ್ವಿಯವರು ಕಾದಂಬರಿಯಲ್ಲಿ ಸಾಂಸ್ಕೃತಿಕ ಸಮ ಪಾತಳಿಯನ್ನು ಸಾಧಿಸಿರುವುದನ್ನು ಕಾಣಬಹುದು.

ಇಡೀ ಕರ್ವಾಲೊ ಕಾದಂಬರಿಯಲ್ಲಿ ಸಾಮಾನ್ಯವಾಗಿ ನಾವೆಲ್ಲ ನೋಡಿರಬಹುದಾದ ವಾಸ್ತವದ ಅನೇಕ ಅಂಶಗಳು ಹೇರಳವಾಗಿ ಬರುತ್ತವೆ.

ನಿರೂಪಕರು ಮೂಡಿಗೆರೆಯ ''ಜೇನು ಪೋಷಕರ ಸಹಕಾರಿ ಸಂಘ'' ಕ್ಕೆ ತೆರಳುವ ಮೂಲಕ ಕಾದಂಬರಿ ಪ್ರಾರಂಭವಾಗುತ್ತದೆ. ಈ ಆರಂಭದ ಸನ್ನಿವೇಶದಲ್ಲಿಯೆ ''ಪೋಷಕ'' ಶಬ್ದದಲ್ಲಿ ''ಷ'' ಅಥವಾ ''ಶ'' ಬಳಕೆ ಸರಿಯೊ ಎನ್ನುವ ಜಿಜ್ಞಾಸೆ ಇದೆ. ಇದು ಸರಳವಾದ ಸನ್ನಿವೇಶವೆನಿಸಿದರೂ, ಅದರ ಹಿಂದೆ ಭಾಷೆಯ ಸರಿ ತಪ್ಪಿನ ಚರ್ಚೆ ಇದೆ, ಭಾಷಾ ಬಳಕೆಯ ತಾತ್ವಿಕ ಪ್ರಶ್ನೆಗಳಿವೆ. ಹೀಗೆ ಕಾದಂಬರಿ ಜಿಜ್ಞಾಸೆಯೊಂದಿಗೆ ಆರಂಭವಾಗುತ್ತದೆ.

''ಆಯುರ್ವೇದ ಪಂಡಿತರು ದಿನಾ ಒಂದು ಚಮಚ ಜೇನನ್ನು ನೀರಿನಲ್ಲಿ ಕದಡಿ ಬೆಳಿಗ್ಗೆ ಕುಡಿಯಿರಿ ಎಂದು ತಿಳಿಸಿದ್ದರಂತೆ'' (ಕರ್ವಾಲೊ, ಪುಟ ಸಂಖ್ಯೆ2) ನಿರೂಪಕರು ಜೇನನ್ನು ಕೊಳ್ಳಲು ಸೊಸೈಟಿಗೆ ಹೋದಾಗ ಈ ಸಾಲಿನ ಉಲ್ಲೇಖವಿದೆ. ಅಂದರೆ ಈಗ ತುಂಬಾ ಪ್ರಸಿದ್ಧವಾಗಿರುವ ಈ ಪದ್ಧತಿಯ ಕುರಿತು ತೇಜಸ್ವಿಯವರು 1980 ರಲ್ಲಿ ಪ್ರಕಟವಾದ ತಮ್ಮ ಕಾದಂಬರಿಯಲ್ಲಿ ಹೇಳಿರುವುದು ತುಂಬಾ ಸೋಜಿಗವೆನಿಸುತ್ತದೆ ಮತ್ತು ಈ ಪದ್ಧತಿಯು ಮೇಲ್ಮಧ್ಯಮ ವರ್ಗದಲ್ಲಿ ಆಗಲೆ ರೂಢಿಯಲ್ಲಿತ್ತು ಎನ್ನುವುದನ್ನು ಕಾಣಬಹುದು.

''ಯಾವುದೋ ಕಲಬೆರಕೆ ಮಾಲನ್ನು ನನಗೆ ಟೋಪಿ ಹಾಕಲು ಈ ಘಾಟಿಗಳು ಯತ್ನಿಸುತ್ತಿದ್ದಾರೆಂದು ಸಂದೇಹ ಬಂತು. ಆದರೆ ಯಾವುದನ್ನು ಕಲಬೆರಕೆ ಮಾಡಿಯಾರು? ಜೋನಿಬೆಲ್ಲ, ಸಕ್ಕರೆಪಾಕ, ಒಳ್ಳೆಣ್ಣೆ ಯಾವುದೂ . . .''(ಅದೇ, ಪು. ಸಂ3) ಇಲ್ಲಿ ತೇಜಸ್ವಿಯವರು ಮನುಷ್ಯನ ತುಂಬಾ ಸಹಜವಾಗಿರುವ ಸಂದೇಹ ಪಡುವ ಗುಣವನ್ನು ಕುರಿತು ಹೇಳುತ್ತಾ ಮುಂದುವರಿದು ಇಂದು ಹೆಚ್ಚಾಗಿರುವ ಆಹಾರ ವಸ್ತುಗಳ ಕಲಬೆರಕೆ ಸಮಸ್ಯೆ ಕುರಿತು ವಿವರಿಸುತ್ತಾರೆ. ಜೇನು ತುಪ್ಪದಲ್ಲಿ ಏನೆಲ್ಲಾ ಬೆರಕೆ ಮಾಡಬಹುದು ಎಂಬುದನ್ನು ನಿರೂಪಕರು ವಿವರಿಸಿದ್ದಾರೆ. ಕಲಬೆರಕೆ ಎಂಬುದು ಇಂದು ದೊಡ್ಡ ಸಮಸ್ಯೆಯಾಗಿದ್ದು. ಅದು ಮಾನವನ ಆರೋಗ್ಯಕ್ಕೆ ಕಂಟಕಪ್ರಾಯವಾಗಿದೆ. ವ್ಯಾಪಾರದಲ್ಲಿ ಇದು ದೊಡ್ಡ ಪಿಡುಗಾಗಿದ್ದು, ಈ ಸಮಸ್ಯೆ ಆಗಲೂ ಇದ್ದ ಬಗ್ಗೆ ಇದರಿಂದ ತಿಳಿಯುತ್ತದೆ. ಕನ್ನಡ ಕಾದಂಬರಿಯಲ್ಲಿ ಈ ಕುರಿತು ಪ್ರಶ್ನೆ ಅಥವಾ ಚರ್ಚೆ ಬಂದಿರುವುದು ಅದೆ ಮೊದಲಿರಬೇಕು.

ಕಾದಂಬರಿಯಲ್ಲಿ ಮುಂದೆ ಬರುವ ಸಂಗತಿಯಲ್ಲಿ ಬಸ್ ಸ್ಟಾಂಡಿನಲ್ಲಿ ಪಿಕ್ ಪಾಕೆಟ್ ಮಾಡುತ್ತಾ ಕಾಲ ಕಳೆಯುತ್ತಿದ್ದ ಪ್ಯಾರನನ್ನು ಅವನ ಹಿನ್ನೆಲೆ ನೋಡದೆ ಅವನಿಗೆ ನಿರೂಪಕರು ತಮ್ಮ ಮನೆಯಲ್ಲಿ ಅಡುಗೆ ಕೆಲಸದ ಸಹಾಯಕನಾಗಿ ತೆಗೆದುಕೊಂಡಿದ್ದು, ನಿರೂಪಕರ ಮಾನವೀಯತೆಯನ್ನು, ಅವರ ಮಾನವೀಯ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಮುಂದೆ ಕಾದಂಬರಿಯಲ್ಲಿ ಧರ್ಮಸ್ಥಳದ ಮಂಜುನಾಥನ ಮೇಲೆ ಆಣೆ ಹಾಕುವ ಪ್ರಸಂಗ ಬರುತ್ತದೆ. ಇದು ಸಾಮಾನ್ಯ ಜನರಿಗೆ

ದೈವದಲ್ಲಿ ಇರುವ ನಂಬಿಕೆಯನ್ನು ತೋರಿಸುತ್ತದೆ. "ಸೊಸೈಟಿಯೊಳಗಿನ ಜೇನಿನ ವಾಸನೆಗೆ ನೂರಾರು ಜೇನುಗಳು, ನೊಣಗಳು, ಇರುವೆಗಳು, ಗೊದ್ದಗಳು ದಾಳಿ ಇಡುತ್ತಿದ್ದವು". "ಅನಂತರ ಗದ್ದೆ ನಾಟಿ, ಕಾಫಿ ಗಿಡಗಳಿಗೆ ಔಷಧ ಸಿಂಪರಣೆ ಮುಂತಾದ ಬಿಡುವಿಲ್ಲದ ಕೆಲಸಗಳಲ್ಲಿ ಎಲ್ಲ ಮರೆಯಾದರು".(ಅದೇ, ಪು.ಸಂ12) ಹೀಗೆ ಕಾದಂಬರಿಯು ದೈನಂದಿನ ಜೀವನದ ವಾಸ್ತವದ ವಿವರಣೆಯಾಗಿದೆ, ಇಲ್ಲಿ ತೇಜಸ್ವಿಯವರು ದಿನನಿತ್ಯದ ಆಗುಹೋಗುಗಳಿಗೆ ಸೃಜನಶೀಲತೆಯ ಸ್ಪರ್ಶ ನೀಡಿದ್ದಾರೆ. ಇಲ್ಲಿ ಸಾಮಾನ್ಯ ಘಟನೆಗಳೆ ಸಾಹಿತ್ಯದ ಸಂದರ್ಭಗಳಾಗಿವೆ ಹಾಗೂ ಅವು ಸೃಜಿಸುವ ಅರ್ಥಗಳು ಹಲವಾರು, ಇದು ಕಾದಂಬರಿಯ ಸಾಮರ್ಥ್ಯ.

"ದೊಡ್ಡ ದೊಡ್ಡ ಕಾಫಿಪ್ಲಾಂಟುರಗಳ ಸಭೆ, ಮದುವೆ ಮುಂತಾದವುಗಳು ನಡೆದಾಗ ತಮ್ಮ ದೊಡ್ಡಸ್ತಿಕೆಯನ್ನು ಸಂಭಾಷಣೆಯಲ್ಲಿ ತೋರಿಸಿಕೊಳ್ಳಲು ಕರ್ವಾಲೊ ತಮಗೆ ಗೊತ್ತು ಎಂದೋ ಅಥವಾ ಕರ್ವಾಲೊ ಹಾಗೆ ಹೇಳಿದರು, ಹೀಗೆ ಹೇಳಿದರು ಎಂದೊ ಮಾತಾಡುತ್ತಿದ್ದರು."(ಅದೇ,ಪು.ಸಂ13) ಇದು ಬಹಳ ಮನುಷ್ಯ ಸಹಜವಾದ ಸ್ವಭಾವ, ದೊಡ್ಡವರೊಂದಿಗೆ ಗುರುತಿಸಿಕೊಳ್ಳುವ ಸಾಮಾನ್ಯ ಜನರ ಬಯಕೆ, ಆ ಮೂಲಕ ತಮ್ಮ ಗುರುತಿಸಿಕೊಳ್ಳುವಿಕೆಯ ಅಹಂ ಅನ್ನು ತೃಪ್ತಿಪಡಿಸಿಕೊಳ್ಳುವ ಮನುಷ್ಯನ ಸಹಜವಾದ ಆಕಾಂಕ್ಷೆ ಇದಾಗಿದೆ. ಇದೊಂದು ಮಾನಸಿಕ ತೃಪ್ತಿಯನ್ನು ಪಡೆಯುವ ಕ್ರಿಯೆ. ಆ ಮೂಲಕ ಒಂದು ಸಂತೋಷ, ಸುರಕ್ಷಿತ ಭಾವ, ನೆಮ್ಮದಿ ಹೊಂದುವ ಮತ್ತು ಉಳಿದವರಿಗೆ, ತಮಗೆ ಯಾರೆಲ್ಲ ಪರಿಚಯವಿದ್ದಾರೆ ಎಂದು ತೋರಿಸಿಕೊಳ್ಳುವ ಐಡೆಂಟಿಟಿ ಕ್ರೈಸಿಸ್‌ನ ಸಮಸ್ಯೆ ಇದು. ಇತ್ತೀಚಿಗೆ ಇದನ್ನು ಸಮಾಜ ಶಾಸ್ತ್ರಜ್ಞರು ಕಲ್ಚರಲ್ ಕ್ಯಾಪಿಟಲ್ ಎಂದು ಗುರುತಿಸುತ್ತಿದ್ದಾರೆ. ಜನರು ಈ ರೀತಿಯ ಸ್ವಭಾವದ ಮೂಲಕ ಇನ್ನೊಬ್ಬರ ಮೇಲೆ ತಮ್ಮ ಪ್ರಭಾವ ಬೀರುವ ಕೆಲಸ ಮಾಡುತ್ತಿರುತ್ತಾರೆ. ಈಗಿನ ಮೊಬೈಲ್ ಯುಗದಲ್ಲಿ ಇದು ಸೆಲ್ಫಿ, ಸ್ಟೇಟಸ್ ರೂಪ ಪಡೆದಿದ್ದು, ಬಹುತೇಕ ಎಲ್ಲರೂ ಈ ಮಾಯಾಜಾಲದಲ್ಲಿ ಸಿಲುಕಿರುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ತೇಜಸ್ವಿಯವರು ಬಹಳ ಸ್ವಾಭಾವಿಕವಾಗಿ ಈ ಸನ್ನಿವೇಶ ತರುವ ಮೂಲಕ ಮನುಷ್ಯನ ಮೂಲಭೂತ ನಡೆವಳಿಕೆಯನ್ನು ತಮಾಷೆಯಾಗಿಯೆ ಚಿತ್ರಿಸಿದ್ದಾರೆ.

"ಮಂದಣ್ಣ ಪರಮಾನಂದದಿಂದ ಹಲ್ಕಿರಿಯುತ್ತಾ "ಏನೋ ತಮ್ಮ ಬಾಯಾಗೆ ಬೆಳಗಿನ ಹೊತ್ನಲ್ಲಿ ಬಂದಿದೆ ಸಾರ್. ಲಕ್ಷ್ಮಣ ನೋಡಿ, ನನ್ನ ವಯಸ್ಸೇ ಆದರೂ ಅವನು ಒಕ್ಕಲಿಗಾಂತ ಬೇಗ ಕೆಲಸ ಸಿಕ್ಕಿ, ಮದುವೆನೂ ಆಗಿ, ಒಂದು ಮಗಾನೂ ಆಯ್ತು" ಎಂದ.(ಅದೇ, ಪು.ಸಂ15) ಇಲ್ಲಿ ತೇಜಸ್ವಿಯವರು ಸಮಾಜದಲ್ಲಿ ಹಾಸುಹೊಕ್ಕಾಗಿರುವ ಸ್ವಜನ ಪಕ್ಷಪಾತ ಮತ್ತು ಜಾತೀಯ ಮೇಲಾಟದ ಸಮಸ್ಯೆಯನ್ನು ಪಾತ್ರದ ಮೂಲಕ ಹೇಳಿಸುವ ಮೂಲಕ ತಮ್ಮ ನಿಲುವನ್ನು ಮತ್ತು ಸಾಮಾಜಿಕ

ವಾಸ್ತವವನ್ನು ಬಹಳ ನಾಜೂಕಾಗಿ ಚಿತ್ರಿಸಿದ್ದಾರೆ. ಇಂದು ಇದು ವ್ಯಾಪಕವಾಗಿ ಹರಡಿ ಕ್ಯಾನ್ಸರ್ ನಂತೆ ಆಗಿ ಸಾಮಾಜಿಕ ಸಾಮರಸ್ಯ ಕೆಡಿಸುತ್ತಿದೆ.

"ಪೋಲಿಸರು ಪೇಟ ಬೀಳಿಸಿಕೊಂಡು ತಕತಕ ಕುಣಿಯುತ್ತಾ ಓಡುತ್ತಿದ್ದುದ್ದನ್ನು ಪರಮಾನಂದದಿಂದ ನೋಡುತ್ತಿದ್ದ ಆರು ಜನ ಹೈಸ್ಕೂಲು ಹುಡುಗರನ್ನು ಮಂತ್ರಿಗಳ ನಿರ್ಗಮನದ ಅನಂತರ ಅರೆಸ್ಟ್ ಮಾಡಿ ಸ್ಟೇಷನ್ನಿಗೆ ಒಯ್ದು ಈ ಕಿಡಿಗೇಡಿಗಳದ್ದೇ ಕುತಂತ್ರ ಎಂದು ಥಳಿಸಿ ಅವರ ಮೇಲೆ ದೊಂಬಿ ಕೇಸು ಹಾಕಿ ಚಿಕ್ಕಮಗಳೂರು ಕೋರ್ಟಿಗೆ ವರ್ಷಾನುಗಟ್ಟಲೆ ಅಲೆಸಿದರು." (ಅದೇ, ಪು.ಸಂ18) ತೇಜಸ್ವಿ ಚಿತ್ರಿಸುವ ಈ ಸನ್ನಿವೇಶವಂತು ವ್ಯಂಗ್ಯದ ಪರಮಾವಧಿ, ಪೋಲಿಸರು ಅಂದು ಮತ್ತು ಇಂದಿಗೂ ಏನೇನೂ ಬದಲಾಗಿಲ್ಲ, ಕಾನೂನು ಬದಲಾಗಿರಬಹುದು, ಅವರ ಶಸ್ತ್ರಾಸ್ತ್ರಗಳು ಬದಲಾಗಿರಬಹುದು, ಅವರ ಕಾರ್ಯವೈಖರಿ ಮಾತ್ರ ಹಾಗೆ ಇದೆ. ಇಲ್ಲಿ ಪೋಲಿಸರು ಸರಿಯಾದ ತನಿಖೆ ಮಾಡಿ ಆರೋಪಿಗಳನ್ನು ಪತ್ತೆ ಮಾಡುವ ಬದಲಿಗೆ ರಾಜಕೀಯ ಒತ್ತಡದಿಂದಾಗಿ ಅಮಾಯಕರನ್ನು ಅರೆಸ್ಟ್ ಮಾಡಿ ಅವರನ್ನು ಆರೋಪಿಗಳನ್ನಾಗಿ ಬಿಂಬಿಸುವ ಈ ಪ್ರಸಂಗ ಸಾಮಾಜಿಕ ವಾಸ್ತವತೆಗೆ ಹಿಡಿದ ಕೈಗನ್ನಡಿಯಾಗಿದೆ.

"ವ್ಯವಸಾಯದಿಂದ ಲಾಭ ಬರುವುದೆಂಬ ನಂಬಿಕೆ ನನ್ನೊಳಗೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಕಟ್ಟುತ್ತಾ ಹೆಚ್ಚೂ ಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರೂ ಪರಿವರ್ತಿತರಾಗಿದ್ದರು." (ಅದೇ, ಪು.ಸಂ25) ಇಲ್ಲಿ ತೇಜಸ್ವಿ ರೈತಾಪಿ ವರ್ಗದ ಗೋಳನ್ನು, ವ್ಯವಸಾಯದ ಮೂಲಭೂತ ಸಮಸ್ಯೆಯನ್ನು ಚಿತ್ರಿಸಿದ್ದಾರೆ. ವ್ಯವಸಾಯದಲ್ಲಿ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿದ್ದು, ಲಾಭ ಅಂದು ಮತ್ತು ಇಂದು ಕನಸಿನ ಮಾತಾಗಿದೆ. ನಿರೂಪಕರಿಗೂ ಈ ಅನುಭವವಾಗಿದೆ. ಕೃಷಿಗಾಗಿ ಹೂಡಿದ ಬಂಡವಾಳವೂ ವಾಪಾಸ್ ಬರುವ ಸಂಭವನೀಯತೆ ತುಂಬಾ ಕಡಿಮೆ ಇದೆ. ಹಾಗಾಗಿ ರೈತರು ಕೃಷಿಗಾಗಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲ ತೀರಿಸದೆ, ಕೇವಲ ಬಡ್ಡಿ ಮಾತ್ರ ಕಟ್ಟುತ್ತಾ, ಬ್ಯಾಂಕಿನವರ ಜೀತದಾಳಾಗಿ ರೈತರು ಪರಿವರ್ತಿತರಾಗಿರುವುದನ್ನು ತೇಜಸ್ವಿ ಇಲ್ಲಿ ವಿಷಾದದಿಂದಲೇ ಚಿತ್ರಿಸಿದ್ದಾರೆ. ಬ್ಯಾಂಕಿನವರ ಸಾಲ ಎಂದೂ ಮುಟ್ಟುವುದಿಲ್ಲ, ರೈತರೆಂದು ಋಣಮುಕ್ತರಾಗುವುದಿಲ್ಲ. ಹೀಗೆ ಒಂದು ಕಡೆ ಕೃಷಿಯ ದಾರುಣ ಚಿತ್ರಣವಿದ್ದರೆ ಮತ್ತೊಂದೆಡೆ ಅಧಿಕಾರಶಾಹಿಯ ಶೋಷಿಸುವ ಮುಖದ, ಸಾಮಾಜಿಕ ಕಟುವಾಸ್ತವದ ಚಿತ್ರಣವನ್ನು ನೋಡಬಹುದು.

"ಸದಾ ಲೆಕ್ಕಾಚಾರ ಗುಣಾಕಾರ ಭಾಗಾಕಾರ ಹಾಕುತ್ತಾ, ಬಡ್ಡಿ, ಸಾಲ ಇವುಗಳನ್ನು ಮೆಲುಕುತ್ತಾ ನನಗೆ ಆರ್ಥಿಕ ಸ್ವಾತಂತ್ರ್ಯ ಬರುವ ಹೊತ್ತಿಗೆ ಎಷ್ಟು ಮುದಿಯಾಗಿರುತ್ತೇನೆ, ಡಯಾಬಟೀಸ್, ರಕ್ತದ ಒತ್ತಡ ಇತ್ಯಾದಿ ಯಾವ ಯಾವ

ಕಾಹಿಲೆಗಳು ಆರಂಭವಾಗಿರುತ್ತವೆ? ಎಂದು ಯೋಚಿಸುತ್ತಾ ಕೊರಗುತ್ತಿದ್ದೆ.'' (ಅದೇ, ಪು.ಸಂ25) ಇಲ್ಲಿ ನಿರೂಪಕರು ಮಧ್ಯಮವರ್ಗದ ಬವಣೆಯನ್ನು ಚಿತ್ರಿಸಿದ್ದಾರೆ. ಮಧ್ಯಮವರ್ಗದ ಒಬ್ಬ ಸಾಮಾನ್ಯ ರೈತನ ಸಂಕಷ್ಟ, ಆಲೋಚನೆಗಳ ನೇರ ಚಿತ್ರಣವಿದು. ಬಹುತೇಕ ರೈತರ ಬದುಕು ಇದೇ ತರ ಚಿಂತೆಯಲ್ಲಿ ಬಸವಳಿದು ಬೆಂದುಹೋಗಿರುತ್ತೆ. ಇದು ಸಾಮಾಜಿಕ ವಾಸ್ತವದ ಮತ್ತೊಂದು ಮುಖ.

''ನೋ ನೋ! ನಂಬಿಕೆಗೆ ಅನರ್ಹವಾಗಿರೋ ಮೊದಲನೇ ಸ್ಪೀಷೀಸ್ ಅಂದರೆ ಹೋಮೋಸೆಪಿಯನ್. ಎರಡು ಕಾಲಿನ ಮಾನವ. ನೀವು ಇನ್ನೂ ಕೀಟಗಳ ಬಗ್ಗೆ ತಿಳಿದುಕೊ ಬೇಕಾದದ್ದು ಬಹಳ ಇದೆ.'' (ಅದೇ, ಪು.ಸಂ30) ಇದು ಕಾದಂಬರಿಯಲ್ಲಿ ನಿರೂಪಕರಿಗೆ ಕರ್ವಾಲೊ ಹೇಳುವ ಮಾತು. ಮನುಷ್ಯನ ಬಗ್ಗೆ ಸಹಜವಾಗಿ ಎಲ್ಲರೂ ಆಡುವ ಈ ಮಾತನ್ನು ವಿಜ್ಞಾನಿ ಕರ್ವಾಲೊನಿಂದ ಹೇಳಿಸುವ ಮೂಲಕ ಲೇಖಕರು ಆ ಮಾತಿನ ಅಧಿಕೃತತೆಯನ್ನು ಹೆಚ್ಚಿಸಿದ್ದಾರೆ. ಆ ಮೂಲಕ ಒಂದು ಸಾಮಾನ್ಯ ಮಾತಿನ ತೂಕ ಇಲ್ಲಿ ಹೆಚ್ಚಾಗಿದೆ. ಇಡೀ ಜೀವಿಸಂಕುಲದಲ್ಲಿ ಮಾನವ ಇಂದು ಅತ್ಯಂತ ಅಪಾಯಕಾರಿಯಾದ ಜೀವಿಯಾಗಿದ್ದಾನೆ, ಅತೀ ಅಪನಂಬಿಕೆಗೆ ಒಳಗಾಗಿದ್ದಾನೆ. ತನ್ನ ಬುದ್ಧಿ ಸಾಮರ್ಥ್ಯದ ಮೂಲಕ ಇಡೀ ಪ್ರಕೃತಿಯ ಆಪೋಶನ ತೆಗೆದುಕೊಳ್ಳುತ್ತಿದ್ದಾನೆ. ಹಾಗಾಗಿ ಕರ್ವಾಲೊರ ಆತಂಕ ಸಹಜವಾದುದು. ಕಾದಂಬರಿಯಲ್ಲಿ ಬರುವ ಮತ್ತೊಂದು ಪ್ರಸಂಗದಲ್ಲಿ ಕರ್ವಾಲೊ ದೊಡ್ಡ ವಿಜ್ಞಾನಿಯಾಗಿದ್ದರೂ, ಒಬ್ಬ ಸಾಮಾನ್ಯ ವ್ಯಕ್ತಿಯಾಗಿರುವ ಮಂದಣ್ಣನ ಜೊತೆಗೆ ಬಹಿರಂಗವಾಗಿ ಸುತ್ತುವುದನ್ನು ನೋಡಿ ಊರಿನ ಜನ ಕರ್ವಾಲೊಗೆ ತುಂಬಾ ಓದಿ ಕೊಂಚ ತಲೆ ಕೆಟ್ಟಿದೆ ಎಂದು ಕೊಳ್ಳುವುದು, ಜೊತೆಗೆ ಅವರೊಬ್ಬ ಕಮ್ಯೂನಿಸ್ಟ್ ಇರಬಹುದು ಎಂದು ಅನುಮಾನ ಪಡುವುದು, ಒಂದು ಕಾಲದಲ್ಲಿ ಅವರ ಬಗ್ಗೆ ಅಭಿಮಾನ ಪ್ರಕಟಿಸಿದ್ದವರು ಇಂದು ಅವರೇ ತೆಗಳಿಕೆ ಇಡುವುದು ಲೇಖಕರು ಉಲ್ಲೇಖಿಸುತ್ತಾ ಜನರ ಮನೋಭಾವದ ಕುರಿತು ಅವಲೋಕಿಸುತ್ತಾರೆ.

''ಈ ಪ್ರಾಣಿ ಜಾತಿಗಳು ಹುಟ್ಟಿದ್ದು ಬಹಳ ವರುಷಗಳ ಹಿಂದೆ..... ಈ ಜಾತಿಯ ಓತಿಗಳು ಚರಿತ್ರಪೂರ್ವ ಪ್ರಾಚೀನ ಯುಗಗಳಿಗೆ ಸೇರಿದವು. .. ಅಗೋಚರ ಕಾರಣಗಳಿಗಾಗಿ ಅವೆಲ್ಲ ಸರ್ವನಾಶ ಹೊಂದಿ ನಾಮಾವಶೇಷವಾಗಿ ಹೋದವು. ಆದರೂ ಒಂದು ಎರಡೋ ಪ್ರಾಣಿಗಳು ಭೂಮಿ ಮೇಲೆ ಹಾಗೂ ಇನ್ನೊಂದೆರಡು ನೀರಿನಲ್ಲಿ ಹೇಗೋ ಹೊಂದಿಕೊಂಡು ಉಳಿದುಬಿಟ್ಟವು. ಆದ್ದರಿಂದ ಕೋಟಿಗಟ್ಟಲೆ ವರುಷಗಳ ಹಿಂದಿನ ಗುಟ್ಟನ್ನೆಲ್ಲಾ ಹೊಟ್ಟೆಯೊಳಗೆ ಇಟ್ಟುಕೊಂಡ ಅಪೂರ್ವ ಜೀವಿಗಳಾಗಿವೆ ಇವು'' (ಅದೇ, ಪು.ಸಂ78) ಕಾದಂಬರಿಯಲ್ಲಿ ಬರುವ ಅತೀ ಮುಖ್ಯ ಘಟ್ಟದ ಮಾತುಗಳು ಇವು. ವೈಜ್ಞಾನಿಕ ಸತ್ಯವನ್ನು ಹೇಳುವ ಕರ್ವಾಲೊ ಅವರ ಈ ಮಾತುಗಳು, ವಿಜ್ಞಾನದ ವಾಸ್ತವ ಸಂಗತಿಗಳನ್ನು ನಿರೂಪಿಸುತ್ತವೆ. ಈ ಮೂಲಕ

ಕಾದಂಬರಿಯ ಗಟ್ಟಿತನಕ್ಕೆ ಕಾರಣವಾಗಿದ್ದು ಮತ್ತು ವಿಜ್ಞಾನದ ಸಂಗತಿಗಳನ್ನು ಹೇಗೆ ಸರಳವಾಗಿ ಸೃಜನಶೀಲ ಸಾಹಿತ್ಯದಲ್ಲಿ ಬಳಸಿಕೊಳ್ಳಬಹುದು ಎನ್ನುವುದಕ್ಕೆ ಈ ಸಾಲುಗಳೆ ಸಾಕ್ಷಿ.

"ಶಿಲಾಪದರಗಳಲ್ಲಿ ಇದರ ಪಳೆಯುಳಿಕೆಗಳು ಸಿಕ್ಕಿವೆ. . . ರೇಡಿಯೊಕಾರ್ಬನ್ ಡೇಟಿಂಗ್ ಅಂತ, ಪೊಟಾಸಿಯಂ ಆರ್ಗಾನ್ ಡೇಟಿಂಗ್ ಅಂತ. . . ಮೂರರ ಮುಂದೆ ಏಳು ಸೊನ್ನೆಗಳನ್ನು ಹಾಕಿದ್ದಾರೆ. ಇದೂ ಸ್ಥೂಲವಾಗಿ, ಆ ಪ್ರಾಣಿ ಇದಕ್ಕಿಂತಲೂ ಹಿಂದಿನದಿರಬಹುದು" (ಅದೇ, ಪು.ಸಂ80) ಈ ರೀತಿಯಲ್ಲಿ ಕರ್ವಾಲೊ ಉಳಿದವರಿಗೆ ಭೌಗೋಳಿಕ ಯುಗಗಳು, ಜೀವ ವಿಕಾಸ, ಪ್ರಳಯಗಳ ಕುರಿತು ತಮ್ಮ ಸಹವರ್ತಿಗಳಿಗೆ ಸಾಕಷ್ಟು ವಿಷಯ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತಾರೆ. ಇವೆಲ್ಲವು ಅತ್ಯಂತ ಕುಶಲತೆಯಿಂದ, ಜಾಣ್ಮೆಯಿಂದ ತೇಜಸ್ವಿ ಓದುಗರಿಗೆ ವಿಷಯ ದಾಟಿಸುವ ಪರಿಯಾಗಿದೆ. ಇದು ತೇಜಸ್ವಿ ವಿಜ್ಞಾನವನ್ನು ಸರಳವಾಗಿ ಅನುಸಂಧಾನಗೊಳಿಸುವ ವಿಧಾನ.

ತೇಜಸ್ವಿಯವರು ಕರ್ವಾಲೊ ಕಾದಂಬರಿಯಲ್ಲಿ ಯಥೇಚ್ಛವಾಗಿ ಇಂತಹ ನೈಜವಾದ ಮತ್ತು ವೈಜ್ಞಾನಿಕ ಸತ್ಯಗಳನ್ನು ಜಿಜ್ಞಾಸೆಗೆ ಒಳಪಡಿಸಿದ್ದಾರೆ. ಪ್ರತಿ ಪುಟದಲ್ಲೂ ಬದುಕಿನ ನೈಜ ಸಂಗತಿಗಳನ್ನು ಚರ್ಚಿಸಿದ್ದಾರೆ, ನಿಕಷಕ್ಕೆ ಒಡ್ಡಿದ್ದಾರೆ. ಆ ಮೂಲಕ ಕಾದಂಬರಿಯನ್ನು ವಾಸ್ತವವಾದದ ಒಂದು ಅದ್ಭುತ ಕಲಾಕೃತಿಯಾಗಿ ರೂಪಿಸಿದ್ದಾರೆ. ಜೊತೆಗೆ ಇನ್ನೊಂದು ದೃಷ್ಟಿಕೋನದಿಂದ ನೋಡಿದರೆ ಈ ಕಾದಂಬರಿಯು ಮನುಷ್ಯ ಅಗಾಧವಾದದ್ದನ್ನು ಹುಡುಕುವ ಅಥವಾ ಸಾಧಿಸುವ ಹಂಬಲ ಹೊಂದಿದ್ದು ಅದನ್ನು ಹುಡುಕ ಹೊರಡುವ ಅವನ ಮನೋಭಾವ ತೋರಿಸುತ್ತದೆ. ಇಲ್ಲಿ ಮನುಷ್ಯನ ಆಳದಲ್ಲಿರುವ ಕುತೂಹಲ, ಹುಡುಕುವ ಹಂಬಲ ಮತ್ತೆ ಮತ್ತೆ ಮುನ್ನೆಲೆಗೆ ಬಂದು ಕಾಡಿನ, ಜೀವಿಗಳ ನಿಗೂಢ ವಿಸ್ಮಯ ಲೋಕದಲ್ಲಿ ಹಾರುವ ಓತಿಯನ್ನು ಹುಡುಕುವ ಮೂಲಕ ಕಥೆ ಪದರ ಪದರವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಬಹುತೇಕ ಇಲ್ಲಿ ಹಾರುವ ಓತಿ ಮನುಷ್ಯನ ಹಂಬಲಗಳನ್ನು, ಆಸೆಗಳನ್ನು, ಆಕಾಂಕ್ಷೆಗಳನ್ನು ಎಂದೂ ತಲುಪಲಾಗದ ಗಮ್ಯಗಳನ್ನು ಪ್ರತಿನಿಧಿಸುವಂತಿದೆ. ತೇಜಸ್ವಿ ಕಾದಂಬರಿಯೊಳಗೊಂದು ಮಾಯಾಲೋಕ ಸೃಷ್ಟಿಸಿ ಅಲ್ಲಿ ಕರ್ವಾಲೊ, ನಿರೂಪಕ, ಮಂದಣ್ಣ ಮಾತ್ರವಲ್ಲ ಓದುಗರನ್ನು ಬಂಧಿಸಿದ್ದಾರೆ. ಸಮಾಜದ ಮತ್ತು ವಿಜ್ಞಾನದ ವಾಸ್ತವ ಸಂಗತಿಗಳನ್ನು ಆಯ್ದು ತೇಜಸ್ವಿ ತಮ್ಮ ಸೃಜನಶೀಲ ಮಾಂತ್ರಿಕ ಸ್ಪರ್ಶ ಮತ್ತು ಶೈಲಿಯ ಮೂಲಕ ಸಾಹಿತ್ಯದ ಮಹೋನ್ನತ ಕಲಾಕೃತಿಯಾಗಿ, ಕಾದಂಬರಿಯಾಗಿ ರೂಪಿಸಿದ್ದಾರೆ. ಆ ಮೂಲಕ ಕರ್ವಾಲೊ ಒಬ್ಬ ನೈಜ ವಿಜ್ಞಾನಿಯಾಗಿರಬಹುದು ಎನ್ನುವಂತೆ ಜೀವಂತಿಕೆಯನ್ನು ತುಂಬಿ ಪಾತ್ರವನ್ನು ಅಜರಾಮರಗೊಳಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ನಾಯಕ ಜಿ.ಎಚ್., (2011), ಮೌಲ್ಯ ಮಾರ್ಗ: ಸಂಪುಟ 1, ಸಿರಿವರ ಪ್ರಕಾಶನ, ಬೆಂಗಳೂರು.
2. ಕೆ.ವಿ.ಎನ್., (2020), ತೊಂಡುಮೇವು: ಕಂತೆ ಮೂರು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
3. ಚಂದ್ರಕಾಂತ ವಡ್ಡು (ಸಂ), (2024), ವಿಸ್ಮಯ ವಿಮರ್ಶೆ, ಸಮಾಜಮುಖಿ ಪ್ರಕಾಶನ, ಬೆಂಗಳೂರು.
4. ನರೇಂದ್ರ ರೈ ದೇರ್ಲ, (2024), ಪೂರ್ಣಚಂದ್ರ ತೇಜಸ್ವಿ, ಕನಸು ಪ್ರಕಾಶನ, ಪುತ್ತೂರು.
5. ರಹಮತ್ ತರೀಕೆರೆ, (2016), ಕತ್ತಿಯಂಚಿನ ದಾರಿ, ಅಭಿನವ, ಬೆಂಗಳೂರು.
6. ವಿಜಯಶಂಕರ ಎಸ್.ಆರ್., (2019), ಅಪ್ರಮೇಯ, ಸಪ್ನ ಬುಕ್ ಹೌಸ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.